# 'ಶ್ರೀರಾಮಕೃಷ್ಣ ವಚನವೇದ'
# ಭಾವಧಾರೆ - 32

**ಸ್ವಾಮಿ ನಿತ್ಯಸ್ಥಾನಂದ**



### ಕ್ಷಮೆಯಿದ್ದರೆ ಕ್ಷೇಮ

ಈ ಸಂದರ್ಭದಲ್ಲಿ ನಾವು ಸ್ಮರಿಸಿಕೊಳ್ಳಬೇಕಾದ ಒಂದು ಮುಖ್ಯ ಗುಣ ಇತರರ ತಪ್ಪನ್ನು ಕ್ಷಮಿಸುವ ಮನೋಭಾವ. ಯೇಸುಕ್ರಿಸ್ತರು ಹೇಳುತ್ತಾರೆ: ''ನೀನು ಇತರರ ತಪ್ಪನ್ನು ಕ್ಷಮಿಸದಿದ್ದರೆ ಭಗವಂತನೂ ನಿನ್ನ ತಪ್ಪನ್ನು ಕ್ಷಮಿಸುವುದಿಲ್ಲ.'' ಈ ವಿಷಯಕ್ಕೆ ಸಂಬಂಧಿಸಿದ ಒಂದು ಕಥೆ ಬೈಬಲ್ಲಿನಲ್ಲಿ ಬರುತ್ತದೆ. ಒಬ್ಬ ರೈತನು ಶ್ರೀಮಂತನೊಬ್ಬನಿಂದ ಸಾಲ ತೆಗೆದುಕೊಂಡಿದ್ದನು. ಅನೇಕ ದಿನಗಳಾದರೂ, ವಾಯಿದೆ ಮೀರಿದ್ದರೂ, ಸಾಲ ತೀರಿಸಲಿಲ್ಲ. ಶ್ರೀಮಂತನು ರೈತನ ಮನೆಗೆ ಸಾಲ ವಸೂಲಿ ಮಾಡಲು ಹೋಗಿ, 'ನಿನ್ನನ್ನು ಮನೆಯಿಂದ ಹೊರಹಾಕಿ, ನಿನ್ನ ಎಲ್ಲ ಆಸ್ತಿಪಾಸ್ತಿಗಳನ್ನೂ ವಶಪಡಿಸಿಕೊಳ್ಳುತ್ತೇನೆ' ಎಂದು ಬೆದರಿಕೆ ಹಾಕಿದನು. ರೈತನು ತನ್ನ ಕಷ್ಟಸುಖಗಳನ್ನು ಹೇಳಿಕೊಂಡು ಈ ಬಾರಿ ತನ್ನನ್ನು ಕ್ಷಮಿಸಬೇಕೆಂದು ಅಂಗಲಾಚಿ ಬೇಡಿಕೊಂಡನು. ಶ್ರೀಮಂತ ಕನಿಕರದಿಂದ ಅವನನ್ನು ಕ್ಷಮಿಸಿ ಹೊರಟುಹೋದನು.

ಆ ರೈತನು ಇನ್ನೊಬ್ಬ ರೈತನಿಗೆ ಸಾಲ ಕೊಟ್ಟಿದ್ದನು. ಅದನ್ನು ವಸೂಲಿ ಮಾಡಲು ಆತನ ಮನೆಗೆ ಹೋದನು. ಆ ರೈತನು ತನ್ನ ತಾಪತ್ರಯಗಳನ್ನು ಅವನ ಮುಂದೆ ತೋಡಿಕೊಂಡು, ''ಸದ್ಯದ ಪರಿಸ್ಥಿತಿಯಲ್ಲಿ ನನಗೆ ಸಾಲ ತೀರಿಸಲಾಗುವುದಿಲ್ಲ. ದಯವಿಟ್ಟು ಕ್ಷಮಿಸಿ'' ಎಂದು ಎಷ್ಟೇ ಕಾಡಿ ಬೇಡಿದರೂ ಕೇಳದೆ, ಸಾಲ ಕೊಟ್ಟ ರೈತನು ಕೋಪೋದ್ರಿಕ್ತನಾಗಿ, ಅವನನ್ನು ಥಳಿಸಿ, ಮನೆಯಿಂದ ಹೊರಹಾಕಿದನು. ಈ ಸುದ್ದಿಯನ್ನು ತಿಳಿದ ಶ್ರೀಮಂತನು ತನ್ನಿಂದ ಸಾಲವನ್ನು ಪಡೆದಿದ್ದ ರೈತನ ಬಳಿಗೆ ಹೋಗಿ, ಕೋಪದಿಂದ ಕೆಂಡಮಂಡಲನಾಗಿ, ''ದುಷ್ಟ! ನಾನು ನಿನ್ನನ್ನು ಕ್ಷಮಿಸಿದರೂ ನೀನು ಆ ರೈತನನ್ನು ಕ್ಷಮಿಸಲಿಲ್ಲವಲ್ಲ! ನೀನು ಕ್ಷಮಾರ್ಹನಲ್ಲ'' ಎಂದು ಗುಡುಗಿ, ಅವನ ಆಸ್ತಿಪಾಸ್ತಿಯನ್ನೆಲ್ಲ ಮುಟ್ಟುಗೋಲು ಹಾಕಿಕೊಂಡು ಅವನನ್ನು ಊರಿನಿಂದಲೇ ಓಡಿಸಿದನು.

ಕ್ಷಮಾಗುಣದ ಕೊರತೆಯಿಂದಾಗಿ ಅನೇಕರು ಇತರರಿಂದ ತಮಗಾದ ತೊಂದರೆ ಅನ್ಯಾಯಗಳನ್ನು ಮೆಲುಕುಹಾಕುತ್ತ ತಮ್ಮನ್ನು ತಾವೇ ನೋಯಿಸಿಕೊಳ್ಳುತ್ತಿರುತ್ತಾರೆ. ಇತರರಿಂದ ತಮಗಾದ ನೋವನ್ನು ಚಿಂತಿಸುತ್ತ, ಶಪಿಸುತ್ತಾ ಆ ನೋವನ್ನು ಇನ್ನೂ ತೀವ್ರಗೊಳಿಸುತ್ತಾರೆ. ಅದು ಗಾಯದ ಮೇಲೆ ಬರೆಹಾಕಿದಂತಾಗುತ್ತದೆ. ಈ ಗಾಯಕ್ಕೆ ಎರಡು ಪರಮೌಷಧಿಗಳು: ಕ್ಷಮಾಗುಣ ಮತ್ತು ಪ್ರಾರ್ಥನೆ. ಯಾರಿಂದ ನಮಗೆ ನೋವಾಗಿದೆಯೋ ಅವರಿಗಾಗಿಯೂ ನಾವು ಪ್ರಾರ್ಥಿಸಬೇಕು. ಏಕೆಂದರೆ ತಮ್ಮೊಳಗೇ ಯಾವುದೋ ನೋವಿಲ್ಲದೆ ಯಾರೂ ಇತರರನ್ನು ಉದ್ದೇಶಪೂರ್ವಕವಾಗಿ ನೋಯಿಸುವುದಿಲ್ಲ. ಈ ರೀತಿಯ ಪ್ರಾರ್ಥನೆಯಿಂದ ಅವರಿಗೂ ಪ್ರಯೋಜನವಾಗಬಹುದು, ನಮಗಂತೂ, ಮನಸ್ಸಮಾಧಾನದ ರೂಪದಲ್ಲಿ , ಪ್ರಯೋಜನವಾಗಿಯೇ ಆಗುತ್ತದೆ.

### ಗುರು-ಕರ್ತ-ತಂದೆ

**ಶ್ರೀರಾಮಕೃಷ್ಣರು:** ''ನನ್ನ ಭಾವ ಏನು ಗೊತ್ತೆ? ನಾನು ಉಂಡು, ತಿಂದು ಆನಂದದಿದ್ದೇನೆ. ಉಳಿದುದೆಲ್ಲ ಭಗವತಿಗೇ ಗೊತ್ತು. ಈ ಮೂರು ಮಾತುಗಳನ್ನು – ಗುರು, ಕರ್ತ, ತಂದೆ ಎಂಬುವನ್ನು ಎತ್ತಿತು ಎಂದರೆ ನನಗೆ ಮುಳ್ಳು ಚುಚ್ಚಿದಂತೆ ಆಗುತ್ತದೆ.

''ಇರತಕ್ಕ ಗುರು ಕೇವಲ ಒಬ್ಬನೇ ಒಬ್ಬ. ಆತನೇ ಸಚ್ಚಿದಾನಂದ. ಆತ ಮಾತ್ರವೇ ಶಿಕ್ಷಣ ಕೊಡಬಲ್ಲ. ನನ್ನದು ಸಂತಾನ ಭಾವ. ಮಾನವನ ಅಂತಸ್ಸಿನಲ್ಲಿರುವ ಗುರುಗಳು ಲಕ್ಷಗಟ್ಟಲೇ ಸಿಗುತ್ತಾರೆ. ಎಲ್ಲರಿಗೂ ಗುರು ಆಗಬೇಕು ಅಂತ ಇಚ್ಛೆ. ಆದರೆ ಶಿಷ್ಯನಾಗಬೇಕು ಅಂತ ಯಾರಿಗೆ ತಾನೆ ಇಚ್ಛೆ ಇದೆ?''

ಶ್ರೀರಾಮಕೃಷ್ಣರದು ಸಂತಾನ ಭಾವ – ಮಗುವಿನ ಸ್ವಭಾವ. ಒಂದು ಮಗು ಉಂಡು ತಿಂದು ಆನಂದದಿಂದಿರುತ್ತದೆ. ಅದಕ್ಕೆ ಯಾವ ಹೊರೆಯೂ ಇಲ್ಲ. 'ಅಹಂ'ನ ಹೊರೆಯಿಲ್ಲ. ಈ ಹೊರೆ ಇದ್ದರೆ ಗುರು, ಕರ್ತಾ, ತಂದೆ ಮುಂತಾದ ಭಾವಗಳು ಬಂದು ಸೇರಿಕೊಳ್ಳುತ್ತವೆ. ಆಗ ಹೊರೆ ಇನ್ನಷ್ಟು ಅಧಿಕವಾಗುತ್ತದೆ.

**ಗುರು:** ಬೇರೆಯವರಿಗೆ ಉಪದೇಶ ಮಾಡುವ ಹುಚ್ಚು, ಇತರರನ್ನು ಉದ್ಧಾರ ಮಾಡುವ ತವಕ, ತನ್ನ ಉದ್ಧಾರದ ಕಡೆಗೆ ಗಮನವಿಲ್ಲ. ಇದನ್ನು Savior Complex ಎಂದು ಕರೆಯುತ್ತಾರೆ. ಒಬ್ಬರು ಹಿರಿಯ ಸ್ವಾಮಿಗಳು ಹೇಳಿದ ಮಾತು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ: ''ಉಪದೇಶ ಮಾಡುವುದೆಂದರೆ ತನಗೆ ಬೇಡದುದನ್ನು ಇತರರಿಗೆ ನೀಡುವುದು.'' ಇದು ತುಂಬ ವಿಚಾರಾರ್ಹವಾದ ವಿಷಯ. ನಾವು ಸಾಮಾನ್ಯವಾಗಿ ನಮಗೆ ಅತ್ಯಂತ ಆವಶ್ಯಕವಾದುದನ್ನು ಇತರರಿಗೆ ಕೊಡುವುದಿಲ್ಲ. ಉಪದೇಶಿಸುವ ವಿಷಯವು ನಮಗೆ ಅತ್ಯಂತ ಆವಶ್ಯಕವಾದುದಾದರೆ ಅದನ್ನು ನಾವೇ ಅನುಭವಿಸಿ ತೃಪ್ತಿಪಡುತ್ತೇವೆ, ಇತರರಿಗೆ ಹೇಳುವುದರಲ್ಲಿ ಉತ್ಸುಕರಾಗಿರುವುದಿಲ್ಲ.

ಶ್ರೀರಾಮಕೃಷ್ಣರಲ್ಲಿ ಗುರುಭಾವವಿತ್ತು ನಿಜ, ಅವರೂ ಸಾಕಷ್ಟು ಉಪದೇಶಗಳನ್ನು ನೀಡಿದ್ದಾರೆ. ಆದರೆ ಅವು ತಮ್ಮ ಜೀವನಾನುಭವದಿಂದ ತುಂಬಿ ತುಳುಕಿದ ಮಾತುಗಳು – ಸೂರ್ಯನಿಂದ ಬೆಳಕು ಹರಿದು ಬರುವಂತೆ. ಅವರ ಗುರುಭಾವದ ಹಿಂದೆ ಅಹಂಭಾವ ಇರಲಿಲ್ಲ.

**ಕರ್ತಾ:** ಅಧಿಕಾರದ ಹುಚ್ಚು. ಮೇಲಧಿಕಾರದಲ್ಲಿರುವವರನ್ನು ಕರ್ತಾಗಳು ಎಂದು ಕರೆಯುತ್ತಾರೆ. ಉನ್ನತ ಅಧಿಕಾರದಲ್ಲಿರುವವರಿಗೆ ಮಾತ್ರ ಈ ಹುಚ್ಚು ಇರುತ್ತದೆ ಎಂದೇನೂ ಅಲ್ಲ. ಸಾಮಾನ್ಯವಾಗಿ ಎಲ್ಲರಲ್ಲೂ ತಾರತಮ್ಯದಿಂದ ಇದು ಇರುತ್ತದೆ. ಇತರರ ಮೇಲೆ ಅಧಿಕಾರ ಚಲಾಯಿಸುವ ಪ್ರವೃತ್ತಿಯನ್ನು ಹೆಚ್ಚು ಕಡಿಮೆ ಎಲ್ಲರಲ್ಲೂ ಕಾಣಬಹುದು. ಗುಲಾಮನೂ ಕೂಡ ತನ್ನ ಕೆಳಗಿರುವವರ ಮೇಲೆ ದಬ್ಬಾಳಿಕೆ ನಡೆಸಲು ಪ್ರಯತ್ನಿಸುತ್ತಾನೆ. ಎಲ್ಲರಿಗೆ ಸ್ವಾತಂತ್ರ್ಯವನ್ನು ಭರಿಸಲಾಗುವುದಿಲ್ಲ. ಅದರಿಂದ ದೂರವಾಗಲು ಕೆಲವರು ಇತರರ ಮೇಲೆ ದಬ್ಬಾಳಿಕೆ ನಡೆಸುತ್ತಾರೆ; ಮತ್ತೆ ಕೆಲವರು ಇತರರ ಕೈಆಳಾಗುತ್ತಾರೆ. ಈ ಮೂಲಕ ಅವರು ಪರಾವಲಂಬಿಗಳಾಗುತ್ತಾರೆ. ಶ್ರೀರಾಮಕೃಷ್ಣರು ಮುಕ್ತರು, ಸ್ವಾತಂತ್ರ್ಯಪ್ರಿಯರು. ಇತರರು ತಮ್ಮ ಅಧೀನರಾಗಿರುವುದನ್ನೂ ತಾವು ಇತರರಿಗೆ ಅಧೀನರಾಗಿರುವುದನ್ನೂ ಅವರು ಸುತರಾಂ ಇಷ್ಟಪಡುತ್ತಿರಲಿಲ್ಲ. ಆದ್ದರಿಂದಲೇ ಅವರು 'ಕರ್ತಾ' ಸ್ಥಾನವನ್ನು ಇಷ್ಟಪಡಲಿಲ್ಲ.

**ತಂದೆ:** ಇತರರ ಮೇಲೆ ಶಿಸ್ತನ್ನು ಬಲಾತ್ಕಾರವಾಗಿ ಹೇರುವ ಪ್ರವೃತ್ತಿ. ಇದು ತಂದೆಯ ಸ್ವಭಾವ. ನಮಗೆ ತಿಳಿದಿರುವಂತೆ, ಶ್ರೀರಾಮಕೃಷ್ಣರಿಗೆ ಇದು ಸಾಧ್ಯವೇ ಇರಲಿಲ್ಲ. ಅವರ ಸರಳತೆ, ನಮ್ರತೆ ಇದಕ್ಕೆ ಅವಕಾಶ ಕೊಡುತ್ತಿರಲಿಲ್ಲ.

## ಲೋಕಶಿಕ್ಷಣ

**ಶ್ರೀರಾಮಕೃಷ್ಣರು:** ''ಲೋಕಶಿಕ್ಷಣ ಬಹಳ ಕಠಿಣವಾದ ಕೆಲಸ. ಭಗವಂತ ತನ್ನ ಸಾಕ್ಷಾತ್ಕಾರ ಕೊಟ್ಟು ಆದೇಶವೀಯುವುದಾದರೆ ಮನುಷ್ಯ ಲೋಕಶಿಕ್ಷಣ ಕಾರ್ಯವನ್ನು ಮಾಡಬಲ್ಲ. ನಾರದ ಶುಕದೇವಾದಿಗಳಿಗೆ ಭಗವಂತನಿಂದ ಆದೇಶ ದೊರೆತಿತ್ತು. ಶಂಕರಾಚಾರ್ಯರಿಗೂ ದೊರೆತಿತ್ತು. ಆದೇಶವಿಲ್ಲದೆ ಇತ್ತು ಎಂದರೆ, ಯಾರು ತಾನೆ ನಿನ್ನ ಮಾತಿಗೆ ಬೆಲೆ ಕೊಡುತ್ತಾರೆ?''

ಲೋಕಶಿಕ್ಷಣ ನಿಜವಾಗಿಯೂ ಅಸಾಧ್ಯವೆ? ಅದು ತಪ್ಪೆ? ಮುಂತಾದ ಅನೇಕ ಪ್ರಶ್ನೆಗಳು ಮನಸ್ಸಿಗೆ ಬರುತ್ತದೆ. ಉಪಾಧ್ಯಾಯರು ಅನೇಕ ವಿಷಯಗಳನ್ನು ಬೋಧಿಸುತ್ತಾರೆ, ಅವರು ಬೋಧಿಸಲೇಬೇಕು. ಅದು ಅವರ ಕರ್ತವ್ಯ, ಅದನ್ನೇ ಸೇವಾ ದೃಷ್ಟಿಯಿಂದ ನೋಡಿದರೆ ಉತ್ತಮ. ಆದರೆ ಶ್ರೀರಾಮಕೃಷ್ಣರು ಇಲ್ಲಿ ಲೌಕಿಕ ಶಿಕ್ಷಣದ ಕುರಿತಾಗಿ ಹೇಳುತ್ತಿಲ್ಲ, ಆಧ್ಯಾತ್ಮಿಕ ಶಿಕ್ಷಣದ ಕುರಿತಾಗಿ ಹೇಳುತ್ತಿದ್ದಾರೆ. ಈ ಶಿಕ್ಷಣವನ್ನು ನೀಡಲು ವ್ಯಕ್ತಿಯು ತಾನೇ ಆ ಅನುಭವವನ್ನು ಪಡೆದಿರಬೇಕು ಎಂಬುದನ್ನು ಶ್ರೀರಾಮಕೃಷ್ಣರು ಸೂಚಿಸುತ್ತಿದ್ದಾರೆ. ಏಕೆಂದರೆ ಇದು ಅನುಭವದ ವಿಷಯ, ಕೇವಲ ಬೌದ್ಧಿಕ ವಿಷಯವಲ್ಲ. ಲೌಕಿಕ ವಿಷಯವನ್ನು ಪುಸ್ತಕ ಜ್ಞಾನದ ಮೂಲಕ ಬೋಧಿಸಬಹುದು. ಅನುಭವದ ವಿಷಯವನ್ನು ಬೋಧಿಸಬೇಕಾದರೆ ಒಬ್ಬನು ತಾನೇ ಅನುಭವಿಸಿರಬೇಕು. ಸಂಗೀತವನ್ನು ಸೈದ್ಧಾಂತಿಕವಾಗಿ ಇತರರಿಗೆ ಬೋಧಿಸಬಹುದು, ಆದರೆ ಇತರರಿಗೆ ಹಾಡುವುದನ್ನು ಹೇಳಿಕೊಡಬೇಕಾದರೆ ತಾನೇ ಸಂಗೀತಗಾರನಾಗಿರಬೇಕು, ಸೈದ್ಧಾಂತಿಕವಾಗಿ ಸಂಗೀತಜ್ಞಾನ ಇಲ್ಲದಿದ್ದರೂ ನಡೆಯುತ್ತದೆ. ಹಾಗೆಯೇ ಲೋಕಶಿಕ್ಷಣಕ್ಕೆ ಶಾಸ್ತ್ರಜ್ಞಾನಕ್ಕಿಂತ ಮುಖ್ಯವಾಗಿ ಅನುಭವಜ್ಞಾನ ಬೇಕಾಗುತ್ತದೆ. ನಾವು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿದಂತೆ ನಮಗೆಷ್ಟು ಅನುಭವವಾಗುತ್ತದೋ ಅಷ್ಟರ ಮಟ್ಟಿಗೆ ಸಹಾಯ ಮಾಡಬಹುದು, ಗುರುಭಾವದಿಂದಲ್ಲ.

ಲೋಕಶಿಕ್ಷಣ ಎಷ್ಟು ಕಠಿಣ ಎಂಬುದಕ್ಕೆ ಸ್ವಾಮಿ ಗಂಭೀರಾನಂದರು ಹೇಳಿದ ಕಥೆಯನ್ನು ಕೇಳಿ: ಒಂದು ದಿನ ಶ್ರೀಕೃಷ್ಣನು ಉದ್ಧವನನ್ನು ಕುರಿತು ಹೇಳಿದನು: 'ನನ್ನ ಉಪದೇಶಗಳೆಲ್ಲವೂ ಗೀತೆ, ಭಾಗವತಗಳಲ್ಲಿ ಉಕ್ತವಾಗಿವೆ. ಆದರೂ ನನ್ನದೊಂದು ಕೊನೆಯ ಸಂದೇಶವಿದೆ. ಅದನ್ನು ಹೇಳಿ ಈ ಪ್ರಪಂಚವನ್ನು ಬಿಟ್ಟು ಹೋಗುತ್ತೇನೆ.' ಆ ಸಂದೇಶ ಯಾವುದೆಂದು ಉದ್ಧವನು ಕೇಳಿದಾಗ ಶ್ರೀಕೃಷ್ಣನು ಹೇಳಿದನು: 'ನೋಡು, ನಾನೇ ಈ ಜಗತ್ತಿಗೆ ಪ್ರಭು. ನಾನು ಮನುಷ್ಯದೇಹವನ್ನು ಧರಿಸಿರುವುದು ಜನರ ಕಷ್ಟಪರಿಹಾರಕ್ಕಾಗಿ. ಆದರೂ ಜನರು ನನಗೆ ಭಯಪಡುತ್ತಾರೆ! ನನ್ನಿಂದ ಯುದ್ಧ ವಿನಾಶಗಳು ಉಂಟಾಗುತ್ತವೆ ಎಂದು ಅವರು ಭಾವಿಸುತ್ತಾರೆ. ಮಹಿಳೆಯರು ನನ್ನನ್ನು ನೋಡಿದಾಕ್ಷಣ ಬಾಗಿಲು ಕಿಟಕಿಗಳನ್ನು ಮುಚ್ಚುತ್ತಾರೆ. ಅಂದು ನನಗೆ ತುಂಬ ಹಸಿವಾಗಿತ್ತು. ಓರ್ವ ಮುದುಕಿ ಹಾಲು ಕರೆಯುತ್ತಿದ್ದುದನ್ನು ನೋಡಿದೆ. 'ನನಗೆ ತುಂಬ ಹಸಿವಾಗಿದೆ, ಏನಾದರೂ ತಿನ್ನುವು

ದಕ್ಕೆ ಕೊಡುತ್ತೀಯಮ್ಮ?' ಎಂದು ಆಕೆಯನ್ನು ಕೇಳಿದ ಕೂಡಲೆ ಹಾಲಿನ ಕುಡಿಕೆಯನ್ನು ಅಲ್ಲಿಯೇ ಬಿಟ್ಟು ಮನೆಯೊಳಗೆ ಓಡಿ ಬಾಗಿಲು ಹಾಕಿಕೊಂಡಳು. ಅಷ್ಟೊಂದು ಭಯ ನನ್ನನ್ನು ಕಂಡು! ನಾನು ಜಗತ್ತಿನ ಹಿತಕ್ಕಾಗಿ ಅಷ್ಟೊಂದು ಪ್ರಯತ್ನಪಟ್ಟೆ. ಆದರೂ ಜನ ನನ್ನನ್ನು ಒಂದು ಅಪಶಕುನ ಎಂದು ಪರಿಗಣಿಸುತ್ತಾರಲ್ಲ! ಎಂದು ದುಃಖವಾಯಿತು. ನನ್ನ ಈ ಜೀವನದ ಕೊನೆಗಾಲದಲ್ಲಿ ನಾನು ಹೇಳುವುದೇನೆಂದರೆ: ನಾನು ಜಗತ್ತಿಗೇ ಒಡೆಯನಾಗಿದ್ದರೂ ಜಗತ್ತಿನ ನೋವು ಮತ್ತು ದುಃಖಗಳನ್ನು ಹೋಗಲಾಡಿಸಲು ನನಗೆ ಸಾಧ್ಯವಾಗಲಿಲ್ಲ. ಆದ್ದರಿಂದ ಯಾರೂ ಈ ಜಗತ್ತಿಗೆ ಒಳ್ಳೆಯದನ್ನು ಮಾಡಲಾರರು.'

ಲೋಕದ ಡೊಂಕನ್ನು ತಿದ್ದಲು ಹೋದರೆ, ನಮ್ಮ ಡೊಂಕು ಅಧಿಕವಾಗುತ್ತದೆ.

### ಸಮಾಜ ಸೇವೆ

**ಶ್ರೀರಾಮಕೃಷ್ಣರು:** ''ಒಮ್ಮೆ ಶಂಭುಮಲ್ಲಿಕ ತಾನು ಕಟ್ಟಿಸಬೇಕೆಂದಿರುವ ಆಸ್ಪತ್ರೆ, ಔಷಧಾಲಯ, ಸ್ಕೂಲು, ರಸ್ತೆ, ಕೊಳ ಇವೇ ಮೊದಲಾದವುಗಳ ಮಾತು ಎತ್ತಿದ. ನಾನು ಆತನಿಗೆ ಹೇಳಿದೆ: 'ಆ ವಿಧದ ಕೆಲಸಗಳಿಗಾಗಿ ಸುಮ್ಮನೆ ಹುಡುಕಿಕೊಂಡು ಹೋಗಬೇಡ. ತಾನಾಗಿಯೇ ಬರುವ ಮತ್ತು ಅತ್ಯಾವಶ್ಯಕವಾಗಿರುವ ಕೆಲಸ ಕಾರ್ಯಗಳನ್ನು ಮಾತ್ರ ಮಾಡು – ನಿಷ್ಕಾಮ ಭಾವನೆಯಿಂದ.' ಬೇಕೂ ಅಂತ ಹೆಚ್ಚಾಗಿ ಕೆಲಸಕಾರ್ಯ ಗಂಟು ಹಾಕಿಕೊಳ್ಳುವುದು ಶ್ರೇಯಸ್ಕರವಲ್ಲ. ಹಾಗೆ ಮಾಡಿದರೆ ಭಗವಂತನನ್ನು ಮರೆತು ಬಿಡಬೇಕಾಗುತ್ತದೆ. ಒಮ್ಮೆ ಕೆಲವರು ಕಾಳೀಘಟ್ಟಕ್ಕೆ ಬಂದರು. ಅವರ ಇಡೀ ಸಮಯವೆಲ್ಲ ದಾನಧರ್ಮಾದಿ ಕಾರ್ಯಗಳಲ್ಲೇ ಕಳೆದುಹೋಯಿತು. ಅವರಿಗೆ ಭಗವತಿಯ ದರ್ಶನ ಮಾಡುವುದಕ್ಕೆ ಸಮಯವೇ ಸಿಗಲಿಲ್ಲ!... ಅದಕ್ಕಾಗಿಯೇ ನಾನು ಶಂಭುಮಲ್ಲಿಕನಿಗೆ ಹೇಳಿದೆ: 'ಒಂದು ಪಕ್ಷ ನಿನಗೆ ಭಗವಂತನ ಸಾಕ್ಷಾತ್ಕಾರ ಆಯಿತು ಅನ್ನು; ಆಗ ನೀನು ಆತನನ್ನು ನಿನಗೆ ಕೆಲವು ಆಸ್ಪತ್ರೆ, ಔಷಧಾಲಯ ಇವೇ ಮೊದಲಾದವನ್ನು ಕಟ್ಟಿಸಿ ಕೊಡುವಂತೆ ಕೇಳಿಕೊಳ್ಳುತ್ತೀಯಾ?' ಭಕ್ತ ಎಂದಿಗೂ ಹಾಗೆ ಮಾಡುವುದಿಲ್ಲ. ಅದಕ್ಕೆ ಬದಲು ಆತನನ್ನು ಪ್ರಾರ್ಥನೆ ಮಾಡಿ ಕೊಳ್ಳುತ್ತಾನೆ: 'ಹೇ ಭಗವಂತ, ನಿನ್ನ ಪಾದಪದ್ಮಗಳಲ್ಲಿ ನನಗೊಂದು ಸ್ಥಾನ ಕೊಡು. ನನ್ನನ್ನು ಸದಾ ನಿನ್ನೊಡನೆ ಇಟ್ಟುಕೊ. ನಿನ್ನ ಪಾದಪದ್ಮಗಳಲ್ಲಿ ನನಗೆ ಶ್ರದ್ಧೆ ಭಕ್ತಿ ಉಂಟಾಗುವಂತೆ ಮಾಡು.'

ನಮಗೆ ಅತ್ಯಂತ ಮೆಚ್ಚಿನ ವ್ಯಕ್ತಿಯನ್ನು ಸಂಧಿಸಿದಾಗ 'ನನಗೆ ಅದು ಕೊಡು, ಇದು ಕೊಡು' ಎಂದು ಕೇಳುತ್ತೇವೆಯೆ? ಅವನ ಸಾನ್ನಿಧ್ಯದಲ್ಲಿ ಎಲ್ಲ ಮರೆತುಹೋಗುತ್ತದೆ. ಹಾಗೆಯೇ ಭಗವಂತನು ನಮ್ಮ ಮುಂದೆ ನಿಂತಾಗ ಅದೆಂತಹ ಆನಂದವುಂಟಾಗುತ್ತದೆಯೆಂದರೆ ಜಗತ್ತೇ ಮರೆತು ಹೋಗುತ್ತದೆ. ಇನ್ನು ಆಸ್ಪತ್ರೆ ಮುಂತಾದವುಗಳ ಕತೆಯೇನು? ಅದಕ್ಕೇ ಶ್ರೀರಾಮಕೃಷ್ಣರು ಹೇಳುತ್ತಾರೆ, ಮೊದಲು ಕಾಳಿಯ ದರ್ಶನ, ಅನಂತರ ದಾನ ಧರ್ಮಾದಿಗಳು. ಈ ಚಿಂತನೆಯನ್ನೇ ಪ್ರತಿಬಿಂಬಿಸುತ್ತದೆ ಸ್ವಾಮಿ ವಿವೇಕಾನಂದರು ನಮಗೆ ನೀಡಿರುವ ಮಂತ್ರ: **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ ।**

**ಶ್ರೀರಾಮಕೃಷ್ಣರು:** ''ಕರ್ಮಯೋಗ ಬಹಳ ಕಠಿಣ. ಶಾಸ್ತ್ರಗಳಲ್ಲಿ ಹೇಳಿರುವ ಕರ್ಮಗಳನ್ನೆಲ್ಲ ಈ ಕಲಿಯುಗದಲ್ಲಿ ಮಾಡಬೇಕೆಂದರೆ ಬಹಳ ಕಷ್ಟ. ಈ ಯುಗದಲ್ಲಿ ಅನ್ನಗತಪ್ರಾಣ. ಹೆಚ್ಚಾಗಿ ಕರ್ಮ ಸಾಧ್ಯವಿಲ್ಲ... ಕಲಿಯುಗಕ್ಕೆ ಸೂಕ್ತವಾದದ್ದು ಭಕ್ತಿಯೋಗ – ಭಗವಂತನ ನಾಮಗುಣಕೀರ್ತನೆ ಮತ್ತು ಪ್ರಾರ್ಥನೆ. ಭಕ್ತಿಯೋಗವೇ ಯುಗಧರ್ಮ.''

### ಭಕ್ತಿಯೋಗವೇ ಯುಗಧರ್ಮ

ಶ್ರೀರಾಮಕೃಷ್ಣರು ಭಕ್ತಿಮಾರ್ಗಕ್ಕೆ ಹೆಚ್ಚು ಒತ್ತನ್ನು ನೀಡುತ್ತಾರೆ. ಅವರು ಬೇರೆ ಯೋಗಗಳಿಗೆ ಪ್ರಾಧಾನ್ಯವನ್ನು ನೀಡಲಿಲ್ಲವೆಂದಲ್ಲ. ಅವರು ಹೆಚ್ಚಾಗಿ ಭಕ್ತರನ್ನು ಕುರಿತು ಮಾತನಾಡುತ್ತಿದ್ದದರಿಂದ, ಜನಸಾಮಾನ್ಯರಿಗೆ ಭಕ್ತಿಯೇ ಸೂಕ್ತವಾದುದರಿಂದ ಅವರು ಭಕ್ತಿಯನ್ನೇ ಹೆಚ್ಚು ಬೋಧಿಸಿದರು. ಆಧುನಿಕ ಸಂದರ್ಭದಲ್ಲಿ ಭಕ್ತಿಮಾರ್ಗದ ಆವಶ್ಯಕತೆಯಿದೆ ಎಂಬುದಕ್ಕೆ ಈ ಕೆಳಗಿನ ಕೆಲವು ಕಾರಣಗಳನ್ನು ನೀಡಬಹುದು.

೧. ಈಗ ಜನರು ವೈವಿಧ್ಯವನ್ನು ಬಯಸುತ್ತಾರೆ. ಭಕ್ತಿಯೋಗದಲ್ಲಿ ಭಜನೆ, ಕೀರ್ತನೆ, ಪೂಜೆ, ಪ್ರಾರ್ಥನೆ ಮುಂತಾದವುಗಳು ಇರುತ್ತವೆ.

೨. ಜನರಿಗೆ ದಿಢೀರ್ ಫಲ ಬೇಕು, ತಾಳ್ಮೆ ಕಡಿಮೆ. ಭಕ್ತಿಮಾರ್ಗದಲ್ಲಿ ಏನಾದರೂ ಸಣ್ಣ ಪುಟ್ಟ ಅನುಭವಗಳು ಆಗುತ್ತಿರುತ್ತವೆ.

೩. ಜನರಿಗೆ ದೇಹಬುದ್ಧಿ ಅಧಿಕ (ಅನ್ನಗತ ಪ್ರಾಣ). ''ದೇಹಬುದ್ಧ್ಯಾ ತು ದಾಸೋಽಹಂ''. ದೇಹಬುದ್ಧಿ ಇರುವಾಗ ದಾಸಭಾವವೇ ಒಳ್ಳೆಯದು.

೪. ಭಕ್ತಿಯೋಗವು ಭಾವಶಕ್ತಿಗೆ ಒತ್ತನ್ನು ನೀಡುತ್ತದೆ (Emotion). ಜ್ಞಾನಯೋಗದಲ್ಲಿ ಆಲೋಚನಾ ಶಕ್ತಿ ಮುಖ್ಯ. ಆದರೆ ಭಕ್ತಿಯು ಕೇವಲ ಭಾವುಕತೆಯಾಗದಿರಲೆಂದು ಶ್ರೀರಾಮಕೃಷ್ಣರು ವಿಚಾರಕ್ಕೆ ಹೆಚ್ಚು ಒತ್ತನ್ನು ನೀಡುತ್ತಾರೆ.

೫. ಈಗಿನ ಶಿಕ್ಷಣ ಪದ್ಧತಿಯಲ್ಲಿ ಆಲೋಚನಾ ಶಕ್ತಿಗೆ ಹೆಚ್ಚು ಒತ್ತನ್ನು ನೀಡಲಾಗುತ್ತಿದೆ. ಆದರೆ ಭಾವಶುದ್ಧಿ, ಭಾವ ಪರಿವರ್ತನೆ ಅತ್ಯಂತ ಆವಶ್ಯಕ — ಪರಸ್ಪರ ಮಾನವೀಯ ಸಂಬಂಧವನ್ನು ಉತ್ತಮಪಡಿಸಲು. ಭಕ್ತಿಯೋಗದ ಮೂಲಕ ಭಾವಪರಿವರ್ತನೆಯಾಗುತ್ತದೆ.

೬. ನಾವಿಂದು ಸ್ಪರ್ಧಾತ್ಮಕ ಜಗತ್ತಿನಲ್ಲಿ ಬಾಳುತ್ತಿದ್ದೇವೆ. ಇದು ಒತ್ತಡ, ನರಬಿಗಿತಗಳಿಗೆ ಕಾರಣವಾಗುತ್ತದೆ. ಈ ನಿಟ್ಟಿನಲ್ಲಿ ಭಜನೆ ಮುಂತಾದ ಭಕ್ತಿಸಾಧನೆಗಳು ತುಂಬ ಸಹಾಯಕವಾಗುತ್ತವೆ.

*(ಮುಂದುವರಿಯುವುದು)*